ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/282ಸಿ/ಇಪಿಆರ್‌ಎಸ್/2022/ಭಾಗ-01/ಕಾನಿವ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:10-10-2023.

ಇವರಿಗೆ,

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ , ಮಂಗಳೂರು , ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಮಾನ್ಯರೆ,

ವಿಷಯ:- **2022-23ನೇ ಸಾಲಿನ E-parನಲ್ಲಿ ಭರ್ತಿ ಮಾಡಿದ ಕಾರ್ಯನಿರ್ವಹಣಾ ವರದಿಯನ್ನು ಸಲ್ಲಿಸುವ ಬಗ್ಗೆ.**

ಉಲ್ಲೇಖ:- ಈ ಕಛೇರಿ ಸಮ ಸಂಖ್ಯೆ ಪತ್ರದ ದಿನಾಂಕ:24-04-2023 ಮತ್ತು 21-09-2023.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ "ಎ", "ಬಿ" ಮತ್ತು "ಸಿ" ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು 2022-23ನೇ ಸಾಲಿನ E-parನಲ್ಲಿ ಭರ್ತಿ ಮಾಡಿ ಪೂರ್ಣಗೊಂಡ ನಂತರ ACR Completed Par Download ಮಾಡಿದ 09 ಪುಟಗಳ ಇ-ಫಾರ್ ಕಾರ್ಯನಿರ್ವಹಣಾ ವರದಿಯನ್ನು (ಬೋಧಕ ವರ್ಗದವರು ವಿಷಯವನ್ನು ಪ್ರತ್ಯೇಕವಾಗಿ ನಮೂದಿಸುವುದು, ನಮೂದಿಸದಿದ್ದಲ್ಲಿ ಅಂತಹ ವರದಿಗಳನ್ನು ಪರಿಗಣಿಸಲಾಗುವುದಿಲ್ಲ) ಹಾಗೂ ಬೋಧಕ/ಬೋಧಕೇತರ ವರ್ಗದವರು ಇ-ಫಾರ್ ವರದಿಯಲ್ಲಿ ಕಾಲೇಜಿನ ಮೊಹರನ್ನು ನಮೂದಿಸಿ ಆಸ್ತಿ-ಋಣ ಪಟ್ಟಿಯ ಒಂದು ಜೆರಾಕ್ಸ್ ಪ್ರತಿಯನ್ನು ಸಹ ಕಾರ್ಯನಿರ್ವಹಣಾ ವರದಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಕೇಂದ್ರಕಛೇರಿಗೆ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿತ್ತು.

ಈ ಸಂಬಂಧ ಪರಿಶೀಲಿಸಲಾಗಿ ಇಲ್ಲಿವರೆವಿಗೂ ಕೆಲವು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಕಾಲೇಜುಗಳಿಂದ ಮಾತ್ರ 2022-23ನೇ ಸಾಲಿನ ACR Completed Par ನ ವರದಿಯು ಸ್ವೀಕೃತಗೊಂಡಿರುತ್ತದೆ. ಉಳಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳ ಕಾರ್ಯನಿರ್ವಹಣಾ ವರದಿಗಳನ್ನು ದಿನಾಂಕ: **16-10-2023**ರ ಒಳಗಾಗಿ ಕೇಂದ್ರಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದ್ದು, ತಪ್ಪಿದ್ದಲ್ಲಿ ಪ್ರಾಂಶುಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ತಿಳಿಸಲಾಗುತ್ತಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಯನ್ನು

1 ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳ, ಅಗತ್ಯ ಕ್ರಮಕ್ಕಾಗಿ.
2 ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3 ರಕ್ಷಕ ಕಡತ.
4 ಕಛೇರಿ ಪ್ರತಿ.